## ಕರ್ನಾಟಕ ಸರ್ಕಾರ ಶಾಲಾ ಶಿಕ್ಷಣ ಇಲಾಖೆ ಅಪರ ಆಯುಕ್ತರ ಕಛೇರಿ, ಐವಾನ್-ಇ-ಷಾಹಿ ಬಡಾವಣೆ ಹತ್ತಿರ ಕಲಬುರಗಿ

ಸಂಖ್ಯೆ: ಸಿ1(1) ಆಡಳಿತ ರಾಪಸ ಹುದ್ದೆ ಬಡ್ತಿ/27/2025-26 ದಿನಾಂಕ: 18.12.2025

ಇವರಿಗೆ
ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ
ಬೀದರ, ಯಾದಗಿರಿ, ರಾಯಚೂರು,
ಕೊಪ್ಪಳ, ಬಳ್ಳಾರಿ ಮತ್ತು ವಿಜಯನಗರ.

ವಿಷಯ: ಕಲಬುರಗಿ ಆಯುಕ್ತಾಲಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಾಂಕಿತ ವ್ಯವಸ್ಥಾಪಕರು / ಸಹಾಯಕ ನಿರ್ದೇಶಕರುಗಳಿಗೆ ರಾಜ್ಯ ಪತ್ರಾಂಕಿತ ಸಹಾಯಕರ ಹುದ್ದೆಗೆ ಮುಂಬಡ್ತಿ ನೀಡುವ ಸಂಬಂಧ ಪ್ರಸ್ತಾವನೆಗಳನ್ನು ಸಲ್ಲಿಸುವ ಕುರಿತು

ಉಲ್ಲೇಖ: ಸಿ1(1) ಆಡಳಿತ ಪವ್ಯ ಜೇಪಟ್ಟಿ/42/2024-25 ದಿನಾಂಕ: 13.10.2025.

<><><><><>

ಉಲ್ಲೇಖಿತ ಪತ್ರದನ್ವಯ ಶಾಲಾ ಶಿಕ್ಷಣ ಇಲಾಖೆಯ ಕಲಬುರಗಿ ಆಯುಕ್ತಾಲಯ ವ್ಯಾಪ್ತಿಯ ಪತ್ರಾಂಕಿತ ವ್ಯವಸ್ಥಾಪಕರು / ಸಹಾಯಕ ನಿರ್ದೇಶಕರ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ: 01.01.2025 ರಲ್ಲಿದ್ದಂತೆ ಪ್ರಕಟಿಸಲಾಗಿದ್ದು, ಕಲಬುರಗಿ ಆಯುಕ್ತಾಲಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಾಂಕಿತ ವ್ಯವಸ್ಥಾಪಕರು/ ಸಹಾಯಕ ನಿರ್ದೇಶಕರುಗಳಿಗೆ ಜೇಷ್ಠತೆ ಅನುಸಾರ ರಾಜ್ಯ ಪತ್ರಾಂಕಿತ ಸಹಾಯಕರ ಖಾಲಿ ಹುದ್ದೆಗಳಿಗೆ ಮುಂಬಡ್ತಿ ನೀಡಲು ತೀರ್ಮಾನಿಸಲಾಗಿರುತ್ತದೆ. ಈ ಕೆಳಗೆ ತಿಳಿಸಿರುವ ಪಟ್ಟಿಯಲ್ಲಿನ ಅಧಿಕಾರಿಗಳು ಸ್ಥಳಿಯ ವೃಂದ ಮತ್ತು ಉಳಿದ ಮೂಲ ವೃಂದದಲ್ಲಿ ರಾಜ್ಯ ಪತ್ರಾಂಕಿತ ಸಹಾಯಕರ ಹುದ್ದೆಗೆ ಮುಂಬಡ್ತಿ ಪಡೆಯಲು ಅರ್ಹರಿರುತ್ತಾರೆ.

ಪ್ರಯುಕ್ತ, ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ನೌಕರರ ಸೇವಾ ವಿವರಗಳನ್ನು ನಮೂದಿಸಿ ಸಂಬಂಧಿಸಿದ ಕಛೇರಿ ಮುಖ್ಯಸ್ಥರು/ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರ ದೃಢಿಕರಣದೊಂದಿಗೆ ಈ ಕೆಳಗೆ ತಿಳಿಸಿರುವ ದಾಖಲೆಗಳೊಂದಿಗೆ ದಿನಾಂಕ 23.12.2025ರ ಒಳಗಾಗಿ ಈ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸಿದೆ.

**<u>ಸ್ಥಳೀಯ ವೃಂದ :</u>**

| ಕ್ರ.ಸಂ | ಜೇಷ್ಠತಾ ಸಂಖ್ಯೆ | ಹೆಸರು / ಹುದ್ದೆ / ಕಛೇರಿ ವಿಳಾಸ |
|---|---|---|
| 1 | 2 | 3 |
| 1 | 52 | ಶ್ರೀ ಎನ್ ಪದ್ಮನಾಭರಾವ, ಪತ್ರಾಂಕಿತ ವ್ಯವಸ್ಥಾಪಕರು (ಪ್ರಸ್ತುತ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವವರು) |
| 2 | 57 | ಶ್ರೀ ರಾಜು ಆರ್ ಡಿ, ಸಹಾಯಕ ನಿರ್ದೇಶಕರು, ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ. |
| 3 | 58 | ಶ್ರೀ ವೆಂಕಟೇಶ ದೇಶಪಾಂಡೆ, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಹೊಸಪೇಟೆ. |
| 4 | 60 | ಶ್ರೀ ಲಿಂಗಪ್ಪ, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ರಾಯಚೂರು ಜಿ: ರಾಯಚೂರು. |
| 5 | 61 | ಶ್ರೀ ಪಿ ಶಿವಕುಮಾರ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಭಾಲ್ಕಿ ಜಿ: ಬೀದರ. |
| 6 | 66 | ಶ್ರೀ ಮಲ್ಲಿಕಾರ್ಜುನ ಪೋಸ್ತಿ, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಶಹಾಪೂರ ಜಿ: ಯಾದಗಿರಿ. |
| 7 | 84 | ಶ್ರೀ ಶರಣಬಸಪ್ಪ, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಬಸವಕಲ್ಯಾಣ. |

**ಉಳಿದ ಮೂಲ ವೃಂದ :**

| ಕ್ರ.ಸಂ | ಜೇಷ್ಠತಾ ಸಂಖ್ಯೆ | ಹೆಸರು / ಹುದ್ದೆ / ಕಛೇರಿ ವಿಳಾಸ |
|---|---|---|
| 1 | 2 | 3 |
| 1 | 12 | ಶ್ರೀ ಎಂ ಪಿ ದೇವಜಿ, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಹರಪನಹಳ್ಳಿ ಜಿ: ವಿಜಯನಗರ. |
| 2 | 13 | ಶ್ರೀ ಮಲ್ಲಿಕಾರ್ಜುನ ಶಿವಮೂರ್ತಿ, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಆಳಂದ ಜಿ: ಕಲಬುರಗಿ. |
| 3 | 14 | ಶ್ರೀಮತಿ ಟಿ ರಮ, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಬಳ್ಳಾರಿ ಪೂರ್ವ ವಲಯ ಜಿ:ಬಳ್ಳಾರಿ. |
| 4 | 15 | ಶ್ರೀಮತಿ ಸುಮಿತಾ, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಮಾನವಿ ಜಿ: ರಾಯಚೂರು. |
| 5 | 17 | ಶ್ರೀ ಶಿವಶಂಕರಪ್ಪ ಚಲುವಾದಿ, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕುಷ್ಟಗಿ ಜಿ: ಕೊಪ್ಪಳ. |

ಕಛೇರಿ ಮುಖ್ಯಸ್ಥರು / ಜಿಲ್ಲಾ ಉಪ ನಿರ್ದೇಶಕರು ದೃಢಿಕರಿಸಿ ಸಲ್ಲಿಸಬೇಕಾದ ದಾಖಲೆಗಳು

1. ಮೂಲ ಸೇವಾ ಪುಸ್ತಕ
2. ನೇಮಕಾತಿ ಆದೇಶ/ ಖಾಯಂ ಪೂರ್ವ ಘೋಷಣೆ ಆದೇಶ ಪ್ರತಿ
3. ಸೇವೆ ತೃಪ್ತಿಕರಗೊಂಡಿರುವ ಆದೇಶ ಪ್ರತಿ.
4. ಸದರಿ ನೌಕರರ ವಿರುದ್ಧ ಇಲಾಖಾ ವಿಚಾರಣೆ/ ಕ್ರಿಮಿನಲ್ & ನ್ಯಾಯಾಲಯ ಪ್ರಕರಣಗಳು ಬಾಕಿ ಇರುವ/ ಇಲ್ಲದಿರುವ ಬಗ್ಗೆ ಅಥವಾ ಹೂಡುವ ಸಂಭವನಿಯತೆಯ ಬಗ್ಗೆ ಹಾಗೂ ದಂಡನೆ ವಿಧಿಸಿರುವ ಬಗ್ಗೆಯ ಮಾಹಿತಿಯನ್ನು ದೃಢೀಕರಿಸಿ ಸಲ್ಲಿಸುವುದು.
5. ಇಲಾಖಾ ಪರೀಕ್ಷೆಗಳು ಪಾಸು ಮಾಡಿರುವ ಪ್ರಮಾಣ ಪತ್ರಗಳು.
6. ಕಂಪ್ಯೂಟರ್ ಪರೀಕ್ಷೆ ಪಾಸು ಮಾಡಿರುವ ಪ್ರಮಾಣ ಪತ್ರಗಳು.
7. ಕನ್ನಡ ವಿನಾಯಿತಿ ಪತ್ರ ಮತ್ತು ದಾಖಲೆ ದೃಢೀಕರಿಸಿ ಸಲ್ಲಿಸುವುದು.
8. ನೌಕರರ ಸೇವಾ ವಿವರಗಳು
9. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ನೌಕರರಿಗೆ ಸಂಬಂಧಿಸಿದಂತೆ ಜಾತಿ ಪ್ರಮಾಣ ಪತ್ರ.
10. 2020-21 ರಿಂದ 2024-25ನೇ ಸಾಲಿನ ಕಾರ್ಯನಿರ್ವಹಣಾ ವರದಿಗಳು.

(ಮಾನ್ಯ ಆಯುಕ್ತರ ಆದೇಶದ ಮೇರೆಗೆ)

**ಸಹ ನಿರ್ದೇಶಕರು (ಆಡಳಿತ)**
ಅಪರ ಆಯುಕ್ತರ ಪರವಾಗಿ
ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ

ಪ್ರತಿಗಳು:

1. ಸಂಬಂಧಪಟ್ಟ ಕಛೇರಿ ಮುಖ್ಯಸ್ಥರು.
2. ಸಂಬಂಧಿಸದ ನೌಕರರಿಗೆ

} ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರ ಮುಖಾಂತರ)